# ಕೃತಜ್ಞತೆಗಳು

ಅಂತಃಪ್ರಜ್ಞೆಯ ಎದುರಿಗೆ ತಲೆ ಎತ್ತಿ ನಿಲ್ಲುವ ಮತ್ತು ಪ್ರತಿ ಕ್ಷಣವೂ ನಡೆನುಡಿಗಳಿಗೆ ತಾಕುತ್ತ ಮೌಲ್ಯಯುತವಾದ ಶುದ್ಧ ವ್ಯಕ್ತಿತ್ವವನ್ನು ರೂಪಿಸಿಕೊಂಡ ಪ್ರೊ. ಶ್ರೀಕಂಠ ಕೂಡಿಗೆಯವರು ನನ್ನ ಗುರುಗಳಾದದ್ದು ನನ್ನ ಬದುಕಿನಲ್ಲಿ ಸಿಕ್ಕ ಬೆಳಕು. ಅವರ ಸತ್ಯ ನಿಷ್ಠುರತೆ, ಪ್ರಾಮಾಣಿಕತೆ, ಅಪಾರವಾದ ಜ್ಞಾನ ಮತ್ತು ನೆಲದ ನೀರಿನಿಂದಲೇ ಅರಳುವ ಅವರ ಆದರ್ಶಗಳು ನಮ್ಮೆಲ್ಲರನ್ನು ಪ್ರಭಾವಿಸಿದ್ದೇ ಅಲ್ಲದೇ, ಭವಿಷ್ಯದ ಬಿತ್ತಾಗಿದೆ. ಈ ಎಲ್ಲಾ ಪ್ರೀತಿ ಗೌರವ, ಅಭಿಮಾನದೊಂದಿಗೆ; ನನ್ನ ಸಂಶೋಧನೆಯ ಮಾರ್ಗದರ್ಶನಕರಾಗಿ, ಈ ಸಂದರ್ಭದಲ್ಲಿ ಎದುರಾದ ಎಲ್ಲ ಸಮಸ್ಯೆಗಳಿಗೂ ಮಾನವೀಯವಾಗಿ ಸ್ಪಂದಿಸಿದ, ಅಮೂಲ್ಯವಾದ ಸಲಹೆ, ಸೂಚನೆಗಳನ್ನು ನೀಡಿ ಸಹಕರಿಸಿದ ಗುರುಗಳಾದ ಪ್ರೊ.ಶ್ರೀಕಂಠ ಕೂಡಿಗೆಯವರಿಗೆ ನನ್ನ ಅಂತರಂಗದ ನಮನಗಳು.

ಸ್ನಾತಕೋತ್ತರ ಪದವಿ ಅಧ್ಯಯನದ ಸಂದರ್ಭದಲ್ಲಿ ತಮ್ಮ ಸರಳ, ಸಜ್ಜನಿಕೆಯ ವ್ಯಕ್ತಿತ್ವದಿಂದ ಅಂತಃಕರಣದ ತುಂಬು ಪ್ರೀತಿಯಿಂದ, ಉನ್ನತವಾದ ಜ್ಞಾನಧಾರೆಯಿಂದ ನಮ್ಮನ್ನು ಬೆಳೆಸಿದವರು ಮತ್ತು ಬದುಕಲು ಕಲಿಸಿದವರು ನನ್ನ ಪ್ರೀತಿಯ ಗುರುಗಳಾದ ಜಿ.ಎಚ್.ನಾಯಕರು. ನನ್ನ ಮನಸ್ಸಿನಲ್ಲಿ 'ಬೇಂದ್ರೆ ಕಾವ್ಯ'ದ ಬಗ್ಗೆ ಅಪಾರವಾದ ಒಲವು ಮತ್ತು ಆಸಕ್ತಿಯನ್ನು ಬೆಳಸಿದವರು. ಅವರನ್ನು ಪ್ರೀತಿಯಿಂದ ನೆನಸಿಕೊಳ್ಳುವುದು ಪ್ರಸ್ತುತ ಸಂದರ್ಭದಲ್ಲಿ ಅರ್ಥಪೂರ್ಣ ಎಂಬ ಭಾವನೆ ನನ್ನದು.

ನನಗೆ ವಿದ್ಯಾಸಂಸ್ಕಾರವನ್ನಿತ್ತು, ವಾತ್ಸಲ್ಯವನ್ನಿತ್ತು ಸಲಹಿ; ನನ್ನ ವ್ಯಕ್ತಿತ್ವವನ್ನು ರೂಪಿಸಿದ ನನ್ನ ತಂದೆ ತಾಯಿಗಳಿಗೆ ಅಂತರಾಳದ ಭಾವನೆಗಳ ಅರ್ಪಣೆ.

ಎಲ್ಲ ಸಂದರ್ಭಗಳಲ್ಲೂ ಹಿರಿಯರಾಗಿ ಧೈರ್ಯ ಮತ್ತು ಮಾರ್ಗದರ್ಶನವನ್ನು ನೀಡಿ ಸಹಕರಿಸುವ ಆತ್ಮೀಯರಾದ, ನಮ್ಮ ಪ್ರೀತಿಯ ಪ್ರಾಚಾರ್ಯರಾದ ಪ್ರೊ.ವಿ.ಎಸ್.ಪ್ರಕಾಶ್ ಅವರಿಗೆ.

ಸಂಶೋಧನೆಯ ಆರಂಭದಿಂದಲೂ ನನ್ನ ಅಧ್ಯಯನಕ್ಕೆ ಒತ್ತಾಸೆಯಾಗಿದ್ದು, ಕೊನೆಯವರೆವಿಗೂ ಸಹಕರಿಸಿದ ಆತ್ಮೀಯರಾದ ಡಾ.ಮಂಜುನಾಥ ಸಕಲೇಶ್ ಅವರಿಗೆ,

ನನ್ನ ಬದುಕಿನ ಎಲ್ಲ ಸಿಹಿ–ಕಹಿಗಳ ಸಂಗಾತಿಗಳಾದ, ಅಪಾರ ಗೆಳೆಯರ ಸಮೂಹದೊಳಗಿನ ಗೆಳತನದ ಪ್ರತೀಕಗಳಾದವರಿಗೆ,

ಬದುಕಿನ ಎಲ್ಲ ಸಂದರ್ಭಗಳಲ್ಲೂ ಮತ್ತು ಪ್ರಸ್ತುತ ಸಂಶೋಧನೆಯ ಅವಧಿಯಲ್ಲಿಯೂ ಸದಾ ಜೊತೆಗಿದ್ದು ಪ್ರೀತಿಯಿಂದ ಸಹಕರಿಸಿದ 'ನನ್ನ ಕುಟುಂಬ'ಕ್ಕೆ,

ನನ್ನ ಸಂಶೋಧನಾ ಮಹಾಪ್ರಬಂಧದ ಡಿ.ಟಿ.ಪಿ ಕೆಲಸವನ್ನು ತಾಳ್ಮೆಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿ ಕೊಟ್ಟ ಸಹೋದರರಾದ ಹೆಚ್.ಬಿ.ಶ್ರೀಪತಿಯವರಿಗೆ,

ಈ ಅಧ್ಯಯನದ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಆತ್ಮೀಯರೆಲ್ಲರಿಗೆ,

**ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳು.**

**ಭಾರತಿ ಟಿ.ಸಿ**